**ಮೂಲ ದಾವಾ ನಂಃ 41/2023**

**ಪಿ ಡಬ್ಲುಃ 01**

ಸಾಕ್ಷಿಯನ್ನು ದಿನಾಂಕಃ **23.06.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ 1 ರಿಂದ 6 ನೇ ಪ್ರತಿವಾದ ಪರ ಶ್ರೀ ಬಿ.ಪಿ.ಪಿ ವಕೀಲರಿಂದಃ**

ನಾನು 6 ನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದೇನೆ , ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ಈ ದಾವೆಯನ್ನು ನನ್ನ ಆಸ್ತಿಗೆ ಸಂಬಂಧಿಸಿದಂತೆ ಹೂಡಿರುತ್ತೇನೆ. ಯಾವ ಕಾರಣಕ್ಕಾಗಿ ದಾವೆಯನ್ನು ಹೂಡಿರುತ್ತೀರಿ ಎಂದರೆ, ನನ್ನ ಆಸ್ತಿಗೆ ಅವರು ಧಮಕಿ ಹಾಕಲು ಬಂದಿದ್ದ ಕಾರಣ ನಾನು ಈ ದಾವೆಯನ್ನು ಹೂಡಿರುತ್ತೇನೆ. ನನ್ನ ಆಸ್ತಿಯ ಸ.ನಂ 3 ಹಿಸ್ಸಾ 1 ಆಗಿರುತ್ತದೆ. ನನ್ನ ಆಸ್ತಿಯ ಅಳತೆಯು ಪೂರ್ವ ಪಶ್ಚಿಮವಾಗಿ 200 ಅಡಿ ಇದ್ದು , ಉತ್ತರ ದಕ್ಷೀಣವಾಗಿ 60 ಅಡಿ ಇರುತ್ತದೆ. ನನ್ನ ಆಸ್ತಿಯ ಅಳತೆಯನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ದಾವಾ ಆಸ್ತಿಯ ಅಳತೆಯ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ನ್ನು ಸಾಕ್ಷಿಗೆ ತೋರಿಸಿ, ಅದರಲ್ಲಿ ಆಸ್ತಿಯ ಅಳತೆ ಇರುವುದಿಲ್ಲ ಎಂದರೆ ಸರಿ . ಹೆಚ್ಚು ಕಮ್ಮಿ ಯಾರದು ಅಳತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿಯ ಚೆಕ್ ಬಂದಿ ಹೇಳಬಹುದೇ ಎಂದರೆ, ಪಶ್ಚಿಮಕ್ಕೆ ಪಂಚಾಯತ್ ರಸ್ತೆ ಇದ್ದು, ಪಶ್ಚಿಮಕ್ಕೆ ರಾಜಪ್ಪ ಮತ್ತು 3 ನೇ ಪ್ರತಿವಾದಿಯರ ಜಮೀನು , ಉತ್ತರಕ್ಕೆ ರುದ್ರಪ್ಪ ಅಂಗಡಿಯವರ ಮನೆ , ದಕ್ಷೀಣಕ್ಕೆ ರುದ್ರಪ್ಪ ಅಂಗಡರವರು ಇದ್ದಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯ ದಕ್ಷೀಣಕ್ಕೆ ರುದ್ರಪ್ಪ ಅಂಗಲಿ ಇವರ ಜಾಗೆಯು ಇದೆ ಎಂದು ತೋರಿಸಿರುತ್ತೇನೆ ಎಂದರೆ, ಅದು ರುದ್ರಪ್ಪ ಅಂಗಡಿ ಎಂದು ನುಡಿಯುತ್ತಾರೆ. ಅದು ಅಂಗಲಿಯೋ ಅಥವಾ ಅಂಗಡಿಯೋ ಎಂದರೆ , ಅಂಗಡಿ ಎಂದು ನುಡಿಯುತ್ತಾರೆ. ನಾನೇ ದಾವಾ ಆಸ್ತಿಯ ಮಾಲೀಕನಾಗಿರುತ್ತೇನೆ. ದವಾ ಆಸ್ತಿ ನನಗೆ ಹೇಗೆ ಬಂದಿರುತ್ತದೆ ಎಂದರೆ, ಅಲ್ಲಿ ಜಾಗ ಇತ್ತು ನಾನು ಅಲ್ಲಿ ಹೊಲ ಮಾಡುತ್ತಾ ಬಂದಿರುತ್ತೇನೆ. ಸದರಿ ಜಾಗದಲ್ಲಿ ಮನೆಯನ್ನು ಹಾಕಿಕೊಂಡಿರುತ್ತೇನೆ , ಅದು ಅರಣ್ಯ ಇಲಾಖೆಗೆ ಸಂಬಂಧಿಸಿದ ಜಾಗ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಎರಡನೇ ಖಂಡಿಕೆಯಲ್ಲಿ ''ದಾವಾಸ್ತಿ ಮನೆಯು ಅರಣ್ಯ ಇಲಾಖೆಯ ಮಾಲೀಕತ್ವದ ಜಮೀನಿನಲ್ಲಿ ಇರುತ್ತಿದ್ದು'' ಎಂದು ಬರೆಸಿರುತ್ತೇನೆ ಎಂದರೆ ಸರಿ.

ನಾನು ಈ ದಾವೆಯಲ್ಲಿ ಅರಣ್ಯ ಇಲಾಖೆಯವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವಾಸ್ತಿಯು ಗಾವಟಾಣಾ ಜಾಗೆಯಾಗಿ ಪರಿವರ್ತನೆ ಆಗಿದೆ ಎಂದು ಹೇಳಿದ್ದು, ಅದಕ್ಕೆ ಸಂಬಂಧಿಸಿದ ದಾಖಲೆಗಳು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಯಾವ ಇಸ್ವಿಯಲ್ಲಿ ಅಥವಾ ಯಾವಾಗ ಸದರಿ ಜಾಗವು ಗಾವಟಾಣಾ ಜಾಗೆ ಆಯಿತು ಎಂದು ಹೇಳಬಹುದು ಎಂದರೆ , ಸದರಿ ಜಾಗದಲ್ಲಿ ಮನೆಯನ್ನು ನಿರ್ಮಿಸಿಕೊಂಡು ಗ್ರಾಮ ಪಂಚಾಯತಗೆ ಅರ್ಜಿಯನ್ನು ಕೊಟ್ಟಿದ್ದು, ದಾಖಲಾತಿಗಳಲ್ಲಿ ಹೆಸರು ಬಂದಿದ್ದು , ಈ ಹಿಂದೆ ಸುಮಾರು 30-35 ವರ್ಷಗಳ ಹಿಂದೆ ಗಾವಟಾಣಾ ಜಾಗೆಯಾಗಿರುತ್ತದೆ. ಸದರಿ ಜಾಗ ಅರಣ್ಯ ಇಲಾಖಾ ಜಾಗೆಯಿಂದ ಗಾವಟಾಣಾ ಜಾಗ ಆದ ಬಗ್ಗೆ ದಾಖಲಾತಿಗಳು ಇದೆಯೇ ಎಂದರೆ ಇಲ್ಲ. ಸುಮಾರು 30-35 ವರ್ಷಗಳ ಹಿಂದೆ ದಾಖಲಾತಿಗಳಲ್ಲಿ ಹೆಸರನ್ನು ಹಚ್ಚಿಸಿಕೊಂಡಿರುತ್ತೇನೆ. ಅದಕ್ಕೆ ಸಂಬಂಧಿಸಿದ ದಾಖಲಾತಿಗಳು ಇದೆಯೇ ಎಂದರೆ ಇಲ್ಲ. ನಿಪಿ.1 ರಲ್ಲಿರುವ ಆಸ್ತಿಯು ಸುಮಾರು 30- 35 ವರ್ಷಗಳ ಹಿಂದೆ ನಮೂದಾಗಿರುತ್ತದೆ ಎನ್ನುವ ಬಗ್ಗೆ

ಈ ಹಿಂದಿನ ಅಂದರೇ 30-35 ವರ್ಷಗಳ ಹಳೆಯ ಉತಾರವನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ , ಹಾಜರುಪಡಿಸುತ್ತೇನೆ.

**(ಈ ಹಂತದಲ್ಲಿ ವಾದಿ ಪರ ವಕೀಲರಾದ ಶ್ರೀ ಆರ್.ಎಸ್.ಹೆಚ್  ಪಾಟೀ ಸವಾಲಿನಲ್ಲಿ  ಹಸ್ತಕ್ಷೇಪ ಮಾಡಿದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**